# ಕೃಶದೇಹವೂ ಪಾತ್ರಕ್ಕೆ ಮುಖ್ಯ

**ರಂಜನ್ ಗೌಡ ಎಚ್.ಎಲ್.**
**ಉದಯದ 'ನಂದಿನಿ'ಯ ಮಿಂಚು**

**◆ ನಿಮ್ಮ ಪಾತ್ರದ ಬಗ್ಗೆ ಹೇಳಿ?**

ಮಂತ್ರವಾದಿಯ ಆಜ್ಞೆಯನ್ನು ಪರಿಪಾಲಿಸುವ ಮಾಯಾವಿ ಪಾತ್ರ. ಮಂತ್ರವಾದಿ ತನ್ನ ಕೆಲಸಕ್ಕೆ ಸಹಾಯ ಮಾಡಿಕೊಳ್ಳಲು ಐದು ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಅದರಲ್ಲಿ ಮಿಂಚು ಕೂಡ ಒಂದು. ಮಂತ್ರವಾದಿಯ ದುಷ್ಟ ಕೆಲಸಗಳನ್ನು ನಾವು ಸಾಧಿಸಿ ತೋರಿಸಬೇಕು. ನನ್ನ ಪಾತ್ರ ಅಂದುಕೊಂಡಿದ್ದನ್ನು ಕಾರ್ಯರೂಪಗೊಳಿಸಿ, ಕ್ಷಣ ಮಾತ್ರದಲ್ಲಿ ಕಣ್ಮರೆಯಾಗುವ ಗುಣವನ್ನು ಹೊಂದಿದೆ.

**◆ ಕಿರುತೆರೆಯ ಪಯಣ ಹೇಗಿದೆ?**

ಆಡಿಷನ್‌ಗೆ ಸಿಕ್ಕಾಪಟ್ಟೆ ಅಲೆದಿದ್ದೇನೆ. ಜ್ಯೂನಿಯರ್ ಆರ್ಟಿಸ್ಟ್ ಆಗಿ ಹೋಗಿದ್ದೇನೆ. ಒನ್ ಡೇ ಆರ್ಟಿಸ್ಟ್ ಆಗಿಯೂ ಮಾಡಿದ್ದೇನೆ. ಯಾರಾದರೂ ಒಂದು ಚಿಕ್ಕ ಪಾತ್ರ ಇದೆ ಎಂದರೆ ಹುಡುಕಿಕೊಂಡು ಹೋಗುತ್ತಿದ್ದೆ. ಬಸ್ಸಿನಲ್ಲಿ ಓಡಾಟ, ರಾತ್ರಿ ತಡ ಆದರೆ ಆಟೋದಲ್ಲಿ ಪಿಜಿಗೆ ಬರಬೇಕು. ಕೆಲವೊಮ್ಮೆ ಮೂರು– ನಾಲ್ಕು ಕಿ.ಮೀ. ನಡೆದದ್ದೂ ಇದೆ. ದೈಹಿಕವಾಗಿ ಅಷ್ಟು ಬಲಾಢ್ಯನಲ್ಲ. ಅದೇ ಕೆಲವೊಮ್ಮೆ ನನ್ನ ಅವಕಾಶಕ್ಕೆ ಮುಳುವಾಗಿದೆ. ಆದರೂ ನಾನು ಎಂದೂ ಎದೆಗುಂದಿಲ್ಲ. ಅದನ್ನು ದೌರ್ಬಲ್ಯ ಎಂದೂ ಭಾವಿಸಿಲ್ಲ. ನೈಸರ್ಗಿಕ ದೇಹಾಕೃತಿ ನನ್ನದು, ಪ್ರಯತ್ನವನ್ನು ಮಾಡುತ್ತೇನೆ. ಒಂದಲ್ಲ ಒಂದು ದಿನ ಅವಕಾಶಗಳು ಸಿಗುತ್ತವೆ ಎನ್ನುವ ವಿಶ್ವಾಸ ಇದೆ. ಕೃಶ ದೇಹವೂ ಕೆಲವು ಪಾತ್ರಕ್ಕೆ ಪ್ರಧಾನ ಪಾತ್ರವಹಿಸುತ್ತದೆ. ಹೋರಾಟ ಅಲೆದಾಟ ಇದ್ದೇ ಇದೆ. ಹುಡುಕುತ್ತಾ ಸಾಗುತ್ತಿದ್ದೇನೆ.

**◆ ಮುಂದೆ ಏನು ಮಾಡುವ ಉದ್ದೇಶ ಇದೆ?**

ಚಿಕ್ಕಮಗಳೂರು ಜಿಲ್ಲೆ ಆಲ್ದೂರು ಹತ್ತಿರ ಹುಕ್ಕುಂದ ನನ್ನೂರು. ಅಲ್ಲಿ ಜಮೀನು ಇದೆ. ಅಪ್ಪ ತೋಟ ಮಾಡಿದ್ದಾರೆ. ಅದನ್ನು ನೋಡಿಕೊಂಡು ಹೋಗಬೇಕು. ಮುಂದೆ ಕೃಷಿಯೇ ನನ್ನ ವೃತ್ತಿ ಎಂದುಕೊಂಡಿದ್ದೇನೆ. ಪ್ಯಾರಾ ಮೆಡಿಕಲ್ ಓದಿದ್ದೇನೆ. ಕೆಲಸ ಎಂದು ಹೋದರೆ ತೋಟ ನೋಡಿಕೊಳ್ಳಲು ಆಗುವುದಿಲ್ಲ ಎಂದು ಕೆಲಸಕ್ಕೆ ಹೋಗಲಿಲ್ಲ. ಈಗಲೂ ಹೆಚ್ಚಿನ ಸಮಯ ತೋಟದ ಕೆಲಸದಲ್ಲಿಯೇ ತೊಡಗಿದ್ದೇನೆ. ಅವಕಾಶ ಸಿಕ್ಕರೆ ಜಾಹೀರಾತು ಶೂಟಿಂಗ್ ಮಾಡುತ್ತೇನೆ. ಸೀರಿಯಲ್ ಶೂಟಿಂಗ್ ಇದ್ದಾಗ ಮುಂಚೆನೇ ಹೇಳಿರುತ್ತಾರೆ. ಆಗ ಬೆಂಗಳೂರಿಗೆ ಬಂದು ಪಿಜಿಯಲ್ಲಿ ಉಳಿದುಕೊಳ್ಳುತ್ತೇನೆ. ಶೂಟಿಂಗ್ ಮುಗಿಸಿಕೊಂಡು ಮತ್ತೆ ಊರಿಗೆ ಬರುತ್ತೇನೆ.

**◆ ನಟ ಆಗಿದ್ದು ಏಕೆ?**

ಚಿಕ್ಕಂದಿನಿಂದಲೂ ನನಗೆ ನಟ ಆಗಬೇಕು ಎನ್ನುವ ಕನಸು ಇತ್ತು. ಅದಕ್ಕಾಗಿಯೇ ಇಷ್ಟೆಲ್ಲಾ ಅಲೆದಾಡುತ್ತಿರುವುದು. ಕೃಷಿಯನ್ನು ಯಾವತ್ತಾದರೂ ಮಾಡಬಹುದು. ಆದರೆ ಇಂತಹ ಸವಾಲುಗಳನ್ನು ಎದುರಿಸಲು ಇದೇ ಸಕಾಲ. ಏಕೆಂದರೆ ನಲವತ್ತು ದಾಟಿದ ನಂತರ ಕುಟುಂಬದ ಬೇರೆಯದೇ ಸಮಸ್ಯೆಗಳು ಎದುರಾಗುತ್ತವೆ. ಆಗ ಕುಟುಂಬ– ಕೃಷಿಯನ್ನು ನೋಡಬಹುದೇ ಹೊರತು ಸುತ್ತಾಡಿ ಅವಕಾಶ ಹುಡುಕಲು ಆಗುವುದಿಲ್ಲ. ಏನಾದರೂ ಮಾಡುವುದಿದ್ದರೆ ಈಗಲೇ ಮಾಡೋಣ ಎಂದು ಎಷ್ಟೇ ಸಮಸ್ಯೆ ಬಂದರೂ ಎದೆಗುಂದದೆ ಮುನ್ನುಗ್ಗುತ್ತೇನೆ. ಜನ ಮೆಚ್ಚುಗೆಯ ನಟ ಆಗಬೇಕು, ತೆರೆಯಲ್ಲಿ ಕಾಣಿಸಿಕೊಳ್ಳಬೇಕು ಎನ್ನುವ ಕನಸು ನನ್ನದು. ಅದು ಸಾಧ್ಯ ಆಗುತ್ತೋ ಇಲ್ಲವೋ ಗೊತ್ತಿಲ್ಲ. ಈಗ ಕೂಡ ದೊಡ್ಡಮಟ್ಟದ ಪಾತ್ರವನ್ನು ನಾನು ಮಾಡುತ್ತಿಲ್ಲ. ಅದರ ನಿರೀಕ್ಷೆಯಲ್ಲಿ ಇದ್ದೇನೆ.

**◆ ಬೆಂಗಳೂರಿನ ಆರಂಭದ ದಿನಗಳು ಹೇಗಿದ್ದವು?**

ಬಣ್ಣದ ಜಗತ್ತು ಏನೂ ಎಂಬುದೇ ಗೊತ್ತಿಲ್ಲ. ಆದರೂ ಬೆಂಗಳೂರಿಗೆ ಬಂದೆ. ಗಾಂಧಿನಗರದಲ್ಲಿ ಒಂದಿಷ್ಟು ದಿನ ಓಡಾಡುತ್ತಾ ಕಾಲಕಳೆದೆ. ಅಲ್ಲಿ ಏನೇನೂ ಗೊತ್ತಾಗಲಿಲ್ಲ. ಪಿ.ಜಿ. ಸೇರಿದೆ. ನನ್ನ ಅಲೆದಾಟ ಕಂಡು ಯಾರೋ ಜೂನಿಯರ್ ಆರ್ಟಿಸ್ಟ್ ಸಂಘದವರ ಸಂಪರ್ಕ ಕೊಟ್ಟರು. ಅಲ್ಲಿ ಪರಿಚಯವಾದವರು, ಫೇಸ್‌ಬುಕ್ ಸ್ನೇಹಿತರ ಮೂಲಕ ಆಡಿಷನ್ ದಿನ ಗೊತ್ತಾಗುತ್ತಿತ್ತು. ಶೂಟಿಂಗ್ ನೋಡುವ ಕುತೂಹಲ ಕೂಡ ಇತ್ತು. ಅದನ್ನೆಲ್ಲವನ್ನೂ ಜೂನಿಯರ್ ಆರ್ಟಿಸ್ಟ್ ಆದ ನಂತರವೇ ನೋಡಿದ್ದು. ಆಗ 300 ರೂಪಾಯಿ ಕೊಡ್ತಾ ಇದ್ರು. ಅದು ಅಲ್ಲೇ ಖರ್ಚಾಗಿ ಹೋಗುತ್ತಿತ್ತು. ಕಲಿಯಬೇಕು ಎನ್ನುವ ಕಾರಣಕ್ಕೆ ಐಡೆಂಟಿಟಿ ಇಲ್ಲದ ಪಾತ್ರಗಳಿಗೂ ಹೋಗುತ್ತಿದ್ದೆ. ಎರಡು ವರ್ಷದಿಂದ ಸುಮಾರು 300 ಆಡಿಷನ್‌ಗಳಿಗೆ ಅಲೆದಿದ್ದೇನೆ. ಯಾವುದೋ ಸೀರಿಯಲ್ ಮೂರು ನಾಲ್ಕು ತಿಂಗಳು ರಿಹರ್ಸಲ್ ಮಾಡಿಸಿದರು. ನಂತರ ಆರಂಭಿಸಲೇ ಇಲ್ಲ. ಅದರಿಂದ ನಾನು ಆಘಾತಕ್ಕೆ ಒಳಗಾಗಿದ್ದೆ. ಆಗ ನಮ್ಮ ಮನೆಯವರೇ ಪ್ರೋತ್ಸಾಹ ನೀಡಿದರು. ಮತ್ತೆ ಜೂನಿಯರ್ ಆರ್ಟಿಸ್ಟ್ ಆದೆ. ಸಿನಿಮಾ ಐದು ಹೀರೋದಲ್ಲಿ ನೀನೂ ಒಬ್ಬ ಐದು ಲಕ್ಷ ಹಾಕು ಎಂದು ಆಹ್ವಾನಿಸಿದವರಿದ್ದಾರೆ. ನನ್ನ ಹತ್ತಿರ ಅಂತಹ ಶಕ್ತಿ ಇಲ್ಲ ಎಂದು ಬಿಟ್ಟಿದ್ದೇನೆ. ದುಡ್ಡು ಇರುವವನಾಗಿದ್ದರೆ ಮೋಸ ಹೋಗುತ್ತಿದ್ದೆ. ದುಡ್ಡಿಲ್ಲದ ಕಾರಣಕ್ಕೆ ಬಚಾವಾದೆ. ಇಂತಹ ಸುಮಾರು ಅನುಭವ ಆಗಿದೆ.

**◆ ನಟನೆಯನ್ನು ಹೇಗೆ ಕಲಿತಿದ್ದು?**

ನಟನೆ ಕಲಿಯಬೇಕು ಎಂದು ಕೆಲವೊಂದು ಸಂಸ್ಥೆಗಳಿಗೆ ಭೇಟಿ ನೀಡಿದ್ದೇನೆ. ಅವುಗಳ ಬಗ್ಗೆ ನನಗೆ ವಿಶ್ವಾಸ ಬರಲೇ ಇಲ್ಲ. ಸಂಸ್ಥೆಯ ಕಡೆಯಿಂದ ಅವಕಾಶ ಕೊಡಿಸುವ ಭರವಸೆಯೂ ಸಿಕ್ಕಿದೆ. ಆದರೆ ಅವರಿಗೆ ಮೊದಲೇ ಹಣ ಪಾವತಿ ಮಾಡಬೇಕು. ಅವಕಾಶವನ್ನು ಅವರೇ ಕೊಡಿಸಲ್ಲ. ಮತ್ತೊಬ್ಬರನ್ನು ಭೇಟಿ ಮಾಡಿಸುತ್ತೇವೆ ಎನ್ನುವ ಮಾತುಗಳನ್ನು ಹೇಳುತ್ತಾರೆ. ಹಾಗಾಗಿ ಅಲ್ಲಿಗೆ ಹೋಗಲಿಲ್ಲ. ಕೆಲವರು ಎರಡು ವರ್ಷ ರಂಗಭೂಮಿಯಲ್ಲಿ ಅಭಿನಯಿಸಲು ಹೇಳಿದರು. ಅಲ್ಲೂ ನನಗೆ ಅಂತಹ ಪರಿಚಯ ಇಲ್ಲ. ಹೋದರೂ ಆರಂಭದಲ್ಲಿ ನಟನೆಗಿಂತ ಬೇರೆ ಏನಾದರೂ ಕೆಲಸ ಮಾಡಿಕೊಂಡು ಇರಬೇಕಾಗುತ್ತದೆ ಎಂದು ಹೋಗಲಿಲ್ಲ. ಕಿರುತೆರೆಯಲ್ಲಿ ನೋಡಿಕೊಂಡು ಕಲಿಯುತ್ತಿದ್ದೇನೆ.

■ **ರಾಘವೇಂದ್ರ ಕೆ.**

